(75)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ ಹಣಮಂತ್ರಾಯ ಸದಬ, ವಾಹನ ಚಾಲಕ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣ ಕಾಡಾ ಭೀಮರಾಯನಗುಡಿ ಇವರ ವೈದ್ಯಕೀಯ ವೆಚ್ಚ ಮರುಪಾವತಿ ಕುರಿತು.

ಓದಲಾಗಿದೆ: 1. ನಿರ್ದೇಶಕರು, ಕಾಡಾ ನಿರ್ದೇಶನಾಲಯ, ಬೆಂಗಳೂರು ಇವರ ಪತ್ರ ಸಂಖ್ಯೆ: ನಿಕಾನಿ / ಆಶಾ / ಸಿ-1 / ವೈ.ವೆ / ಮರುಪಾವತಿ / 2021 - 22/1071. ದಿನಾಂಕ:19.11.2021.

2. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು, ಇವರ ಪತ್ರ ಸಂಖ್ಯೆ: ಆಸುಕ/ಎಸ್. ಎ. ಎಸ್.ಟಿ/ ಎಂ.ಆರ್.ಸಿ /7342/2021-22 ದಿನಾಂಕ:30.08.2021

* * * * * *

**ಪ್ರಸ್ತಾವನೆ:**

ನಿರ್ದೇಶಕರು, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ ನಿರ್ದೇಶನಾಲಯ, ಬೆಂಗಳೂರು ಇವರು ಮೇಲೆ ಓದಲಾದ ಕ್ರಮಾಂಕ(1)ರಲ್ಲಿನ ದಿನಾಂಕ:19.11.2021ರ ಪತ್ರದಲ್ಲಿ ಆಡಳಿತಾಧಿಕಾರಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಭೀಮರಾಯನಗುಡಿ ಕಚೇರಿಯಲ್ಲಿ ವಾಹನ ಚಾಲಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ ಹಣಮಂತ್ರಾಯ ಸದಬ, ಇವರು ಹೃದಯ ಖಾಯಿಲೆಯ ನಿಮಿತ್ತ ದಿನಾಂಕ:19.08.2020 ರಿಂದ 22.08.2020ರ ವರೆಗೆ Sri Sai Cadiac & Critical Care Centre, Vijayapura ಇಲ್ಲಿ ಚಿಕಿತ್ಸೆ ಪಡೆಯಲಾಗಿದ್ದ ವೈದ್ಯಕೀಯ ಚಿಕಿತ್ಸೆಗೆ ಭರಿಸಲಾದ ಒಟ್ಟು ರೂ.1,12,140/- ಗಳನ್ನು ಮರುಪಾವತಿಸುವಂತೆ ಕೋರಿದ್ದರ ಮೇರೆಗೆ, ಸದರಿಯವರು ಚಿಕಿತ್ಸೆ ಪಡೆದ Sri Sai Cadiac & Critical Care Centre, Vijayapura ಆಸ್ಪತ್ರೆಯು ಸರ್ಕಾರದಿಂದ ಅಧಿಸೂಚಿತವಲ್ಲದ ಖಾಸಗಿ ಆಸ್ಪತ್ರೆಯಾಗಿರುವುದರಿಂದ ಸದರಿಯವರು ವೈದ್ಯಕೀಯ ಚಿಕಿತ್ಸೆಗಾಗಿ ಮಾಡಿರುವ ವೆಚ್ಚದಲ್ಲಿ ಅರ್ಹತಾ ಮೊತ್ತವಾದ ರೂ.41,278/- ಗಳನ್ನು ಮರುಪಾವತಿಸುವ ಕುರಿತು ಸರ್ಕಾರದ ವಿಶೇಷ ಮಂಜೂರಾತಿ ನೀಡುವಂತೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

2. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬೆಂಗಳೂರು ಇವರು ಮೇಲೆ ಓದಲಾದ ಕ್ರಮಾಂಕ(2)ರಲ್ಲಿನ ದಿನಾಂಕ:30.08.2021ರ ಪತ್ರದಲ್ಲಿ ಪತ್ರದಲ್ಲಿ, ಶ್ರೀ ಹಣಮಂತ್ರಾಯ ಸದಬ, ವಾಹನ ಚಾಲಕ ಇವರು ಚಿಕಿತ್ಸೆ ಪಡೆದ Sri Sai Cadiac & Critical Care Centre, Vijayapura ಆಸ್ಪತ್ರೆಯು ಖಾಸಗಿ ಆಸ್ಪತ್ರೆಯಾಗಿದ್ದು, ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿದ್ದಲ್ಲಿ ಸದರಿಯವರಿಗೆ ರೂ.41,278/- ಗಳ ಅರ್ಹತಾ ಮೊತ್ತ ಪಾವತಿಸಬಹುದೆಂದು ಅಭಿಪ್ರಾಯ ನೀಡಿರುತ್ತಾರೆ.

3. ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ, ಶ್ರೀ ಹಣಮಂತ್ರಾಯ ಸದಬ, ವಾಹನ ಚಾಲಕ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಭೀಮರಾಯನಗುಡಿ ಇವರು ಹೃದಯ ಖಾಯಿಲೆಯ ನಿಮಿತ್ತ ತುರ್ತು ಸಂದರ್ಭವಿದ್ದ ಕಾರಣ Sri Sai Cadiac & Critical Care Centre, Vijayapura ಇಲ್ಲಿ ಚಿಕಿತ್ಸೆ ಪಡೆದಿದ್ದು, ಸದರಿಯವರು ಚಿಕಿತ್ಸೆ ಪಡೆದ ಸಂದರ್ಭ ಮತ್ತು ಸನ್ನಿವೇಶಗಳನ್ನು ಪರಿಶೀಲಿಸಿ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ನಿಯಮ 31 ರಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅದೇ ನಿಯಮಗಳ ನಿಯಮ 14ನ್ನು ಸಡಿಲಿಸಿ, ವೈದ್ಯಕೀಯ ವೆಚ್ಚದ ಅರ್ಹತಾ ಮೊತ್ತ ರೂ.41,278/- ಗಳನ್ನು ಮರುಪಾವತಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಜಸಂಇ 02 ಸಿಯುಕೆ 2022**

**ಬೆಂಗಳೂರು, ದಿನಾಂಕ:23.02.2022**

ಶ್ರೀ ಹಣಮಂತ್ರಾಯ ಸದಬ, ವಾಹನ ಚಾಲಕ, ಇವರು ಆಡಳಿತಾಧಿಕಾರಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಭೀಮರಾಯನಗುಡಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಹೃದಯ ಖಾಯಿಲೆಯ ನಿಮಿತ್ತ ದಿನಾಂಕ:19.08.2020 ರಿಂದ 22.08.2020ರ ವರೆಗೆ Sri Sai Cadiac & Critical Centre, Vijayapura ಖಾಸಗಿ ಆಸ್ಪತ್ರೆಯಲ್ಲಿ ಪಡೆದ ವೈದ್ಯಕೀಯ ಚಿಕಿತ್ಸೆಗಾಗಿ ಭರಿಸಲಾದ ವೆಚ್ಚದಲ್ಲಿ ಮರುಪಾವತಿಗೆ ಅರ್ಹವಾಗಿರುವ ಮೊತ್ತ ರೂ.41,278/- (ನಲವತ್ತೊಂದು ಸಾವಿರದ ಎರಡುನೂರ ಎಪ್ಪತ್ತೆಂಟು ರೂಪಾಯಿಗಳು ಮಾತ್ರ) ಗಳನ್ನು ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963 ರ ನಿಯಮ 31 ರನ್ವಯ ಹಾಗೂ ಸದರಿ ನಿಯಮಗಳ ನಿಯಮ 14 ನ್ನು ಸಡಿಲಿಸಿ, ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 31 ಎಸ್‌ಎಂಆರ್ 2014, ದಿನಾಂಕ:05.11.2015ರಲ್ಲಿ ಇಲಾಖೆಯ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಮರುಪಾವತಿಸಲು ಸರ್ಕಾರವು ಅರ್ಹತಾ ಮೊತ್ತವನ್ನು ಪಾವತಿಸುವ ಕುರಿತು ಅಗತ್ಯ ಪೂರಕ ಮಾಹಿತಿ/ಮೂಲ ದಾಖಲಾತಿಗಳೊಂದಿಗೆ ಪರಿಶೀಲಿಸಿ ಪಾವತಿಸುವ ಷರತ್ತು ಹಾಗೂ ಈ ಕೆಳಕಂಡ ಷರತ್ತಿಗೊಳಪಟ್ಟಂತೆ ವಿಶೇಷ ಮಂಜೂರಾತಿ ನೀಡಿದೆ.

1. ಸರ್ಕಾರಿ ನೌಕರನು ಕರ್ನಾಟಕ ಆರ್ಥಿಕ ಸಂಹಿತೆ 1958ರ ಕಲಂ 146(A)(ii) ರ ಪ್ರಕಾರ ಸೂಕ್ತ ಕಾಲದಲ್ಲಿ ವೈದ್ಯಕೀಯ ವೆಚ್ಚದ ಮರುಪಾವತಿಯ ಕ್ಲೈಂ ಅನ್ನು ಮೂಲ ದಾಖಲೆಗಳೊಂದಿಗೆ ಸಲ್ಲಿಸಿದ್ದಾರೆಯೇ? ಇಲ್ಲದಿದ್ದಲ್ಲಿ, ಕಾಲವಿಳಂಬ ಮನ್ನಾ ಮಾಡುವ ಬಗ್ಗೆ, ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ಆದೇಶ ಹೊರಡಿಸಿದ ನಂತರವೇ ವೈದ್ಯಕೀಯ ವೆಚ್ಚ ಮರುಪಾವತಿಗೆ ಸಹಮತಿಸತಕ್ಕದ್ದು.
2. ಕ್ಲೈಮು ಮಾಡಿರುವ ಚಿಕಿತ್ಸೆಯ ವೆಚ್ಚವನ್ನು ವಿಮಾ ಸಂಸ್ಥೆ ಇತ್ಯಾದಿ ಯಾವುದೇ ಇತರ ಮೂಲದಿಂದ ಹಿಂಪಡೆದಿರುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
3. ಸರ್ಕಾರಿ ನೌಕರರ ಪತ್ನಿ/ಪತಿಯು ರಾಜ್ಯ/ಕೇಂದ್ರ ಸರ್ಕಾರಿ/ಅರೆ ಸರ್ಕಾರಿ/ಖಾಸಗಿ ಸಂಸ್ಥೆಯ ನೌಕರರಾಗಿದ್ದಲ್ಲಿ ಅವರು ಈ ಬಗ್ಗೆ ವೈದ್ಯಕೀಯ ವೆಚ್ಚದ ಮರುಪಾವತಿಗೆ ಅರ್ಜಿ ಸಲ್ಲಿಸಿರುವುದಿಲ್ಲವೆಂಬುದನ್ನು ಖಚಿತ ಪಡಿಸಿಕೊಳ್ಳತಕ್ಕದ್ದು.
4. ಯಾವುದೇ ಕಾರಣಕ್ಕೂ ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಶಿಫಾರಸ್ಸು ಮಾಡಿರುವ ಮೊಬಲಗನ್ನು ಮೀರಿ ವೈದ್ಯಕೀಯ ವೆಚ್ಚ ಹಿಂಬರಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

M.A.Mahalakshmi

(ಮಹಾಲಕ್ಷ್ಮಿ ಎಂ.ಎ)
ಸರ್ಕಾರದ ಅಧೀನ ಕಾರ್ಯದರ್ಶಿ,
ಜಲಸಂಪನ್ಮೂಲ ಇಲಾಖೆ (ಕಾಡಾ) (ಪ್ರ)
23-02-2021

<u>ಇವರಿಗೆ:</u>

1. ಪ್ರಧಾನ ಮಹಾಲೇಖಪಾಲರು (ಎ & ಇ) (ಜಿ & ಎಸ್‌ಎಸ್‌ಎ) ಮತ್ತು (ಇ & ಆರ್‌ಎಸ್‌ಎ) ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರಗಳ ನಿರ್ದೇಶನಾಲಯ, ರಾಜಾಜಿನಗರ, ಬೆಂಗಳೂರು. (ಮೂಲ ವೈದ್ಯಕೀಯ ಬಿಲ್ಲುಗಳೊಂದಿಗೆ).
3. ಆಡಳಿತಾಧಿಕಾರಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ, ಭೀಮರಾಯನಗುಡಿ.
4. ಶ್ರೀ ಹಣಮಂತ್ರಾಯ ಸದಬ, ವಾಹನ ಚಾಲಕ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ, ಕೃಷ್ಣಾ ಮೇಲ್ದಂಡೆ ಯೋಜನೆ ಭೀಮರಾಯನಗುಡಿ.
5. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.